ರೆವಿನ್ಯೂ ವ ಸರ್ವೇ ವ ಸೆಟಿಲ್‌ಮೆಂಟ್ ಇಲಾಖಾ—ಇಸ್ತಿಹಾರ್‌ನಾಮಾ.

ನಂ. 540 —ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆ|| ಇ, ಡಬ್ಲಿಯು. ಲ್ಯಾನರ್ಕಯವರು ಸ್ಪೈಟ್‌ಸ್ ಸೆಟ್ಟ್ ಲ್ಮೆಂಟ್ ಸರ್ತಾರದಿಂದ ಕೊಡಲ್ಪಟ್ಟ ನೌಕರೀಯನ್ನು ಅಂಗೀಕರಿಸಿದ್ದರಿಂದ ಸದರೀ ಯವರ ಹೆಸರು ಸ್ರ 1884ನೇ ಇಸವಿ ನವಂಬರ್ ಗುರ್ರೇ ಲಾಗಾಯಿತು ಮೈಸೂರು ರೆವಿನ್ಯೂ ಸರ್ವೇ ಆಫಿಸರ್‌ಗಳ ಪಟ್ಟಿಯಲ್ಲಿ ಇರಲು ಮನ್ನಾ ಮಾಡಿರೋಣಾಗಿರುತ್ತೆ.

ಜೆ. ಪಿ. ಗ್ಯಾಂಟ್,
ಸೂಪರ್‌ಟೆಂಡೆಂಟ್ ರೆವಿನ್ಯೂ ಸರ್ವೆ ವ ಸೆಟಿಲ್ಮೆಂಟ್.

ಫಿನಾರ್ಷಿಯಲ್ ಇಲಾಖಾ.

ತಾಲ್ಲೂಕು ಖಜಾನೇ ರಸೀದಿಗಳನ್ನು ಕುರಿತು.

ಡಿಪ್ಯೂಟೀ ಕಮ್ಮಿಷನರ್‌ಗಳಿಗೆ, ಟ್ರೆಜರೀ ಇಲಾಖಾ,—ಸ್ರ 1884ನೇ ಇಸವಿ ನವಂಬರ್ 28ನೇ ಮುಕ್ತಂ ಸರ್‌ಕ್ಯೂಲರ್ ನಂಬರ್ 1607.

ಕಂಟ್ರೋಲರ್‌ಯವರು, ತಾಲ್ಲೂಕು ಖಜಾನೆಗಳಲ್ಲಿ ಉಪಯೋಗದ ಬಗ್ಯೆ ಬುಕ್ಕು 1ಕ್ಕೆ 100 ಫಾರಂಗಳು ಇರತಕ್ಕ ಕನ್ನಡ ರಸೀದಿಗಳ ಪುಸ್ತುಕಗಳನ್ನು * ಅಲಾಹಿದಾ ಬಸ್ತಿನಲ್ಲಿ ರವಾನೆ ಮಾಡಿರುತ್ತಾರೆ.

	ಬುಕ್ಕುಗಳ ಸಂಖ್ಯೆ.	
*ಬೆಂಗಳೂರು	18	ಪ್ರತಿ ಅಮಲ್‌ದಾರ್‌ರಿಗೂ 2 ಪುಸ್ತುಕಗಳು ಕಳಿಹಿಸಲ್ಪಡತಕ್ಕದ್ದೆಂತಲೂ ತಾಲ್ಲೂಕು
ಕೋಲಾರ	16	ಖಜಾನೆಗಳಲ್ಲಿ ಡಿಪಾಜಿಟ್‌ಗಳಿಗೋಸ್ಕರವೂ, ಮತ್ತು ಸ್ಪೆಸೆಲ್ ರಸೀದಿ ಫಾರಂಗಳ್ಯಾವ
ತುಮಕೂರು	22	ದೂ ವಿಧಿಸಲ್ಪಡದೆ ಯಿರುವ ಇತರ ತಮಾಂ ಬಾಬ್‌ಗಳಿಗೋಸ್ಕರವೂ ಬರುವ ಮೊಬ
ಶಿವಮೊಗ್ಗ	18	ಲಗುಗಳಿಗೆ ರಸೀದಿ ಕೊಡುವ ಬಗ್ಯೆ ಈ ಅಚ್ಚಿನ ಫಾರಂಗಳು ಉಪಯೋಗಿಸಲ್ಪಡತಕ್ಕ
ಕಡೂರು	18	ದ್ದೆಂತಲೂ ಹುಕ್ಕುಂ ಮಾಡತಕ್ಕದ್ದು.
ಮೈಸೂರು	28	
ಜುಮ್ಲಾ	120	

1882ನೇ ಇಸವಿಗು ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಯಾಂಡ್ ಬೀರಿ, 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವ ರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫೇನ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಹ್ಯಾಪ್ಲಿಕೇಟಾದ ಡಿವಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 298.

ಅರ್ಜೀದಾರ ಅನೆಕಲ್ಲು ತಾ|| ಸರ್ಜಾಪುರದಲ್ಲಿ ಇರುವ ಆಕಲ್ಲ ಪೊನ್ನಯ್ಯನ ಹೆಂಡತಿ ವೆಂಕಟಲಕ್ಷ್ಮಮ್ಮ ಮೈನರಾದ ಸರ್ಜಾಪುರದ ಸ್ಥಳದ ದೊಡ್ಡವೆಂಕಟಪ್ಪ, ಚಿಕ್ಕವೆಂಕಟಪ್ಪ, ವೆಂಕಟ ಮುನಿಯಪ್ಪ ಇವರುಗಳ ಆಸ್ತಿ ವಿಷಯದಲ್ಲಿ.